# ಮದುವೆ ಅದ್ಧೂರಿಗಾಗಿ

**ಹರೀಶ್ ಎಲ್.ಎಂ.**

ಸ್ಟಾರ್ ಸುವರ್ಣದ 'ಸರ್ವಮಂಗಳ ಮಾಂಗಲ್ಯ'ದ ನಿರ್ಮಾಪಕ

★ *ನಟನೆಯಿಂದ ನಿರ್ಮಾಣದತ್ತ ಸಾಗಿದ್ದೇಕೆ?*

ನಿರ್ಮಾಣ ಮಾಡಬೇಕು ಎನ್ನುವ ಆಶೆ ಇತ್ತು. ನಾನು ನಿರ್ಮಿಸುವ ಧಾರಾವಾಹಿ ಎಲ್ಲಾ ರೀತಿಯಿಂದಲೂ ಸೃಜನಶೀಲವಾಗಿ ಇರಬೇಕು ಎನ್ನುವ ಬಯಕೆ ನನಗಿತ್ತು. ಕಾಸ್ಟ್ಯೂಮ್ಸ್, ಕಥೆ, ಲೊಕೇಶನ್, ನಟರ ಆಯ್ಕೆ ಎಲ್ಲದರಲ್ಲೂ ಭಿನ್ನ ಎನ್ನುವುದನ್ನು ನಿರೂಪಿಸಲು ನಿರ್ಮಾಣದತ್ತ ಬಂದೆ.

★ *ಅಭಿನಯ ಎಲ್ಲಿ ಕಲಿತಿದ್ದು?*

ಮಾಗಡಿ ನನ್ನೂರು. ತಂದೆ ಗೋಪಾಲಯ್ಯ ಶಿಕ್ಷಕರಾಗಿದ್ದರು. ತಾಯಿ ಗಂಗಹನುಮಕ್ಕ ಅವರೂ ಶಿಕ್ಷಕಿ. ಓದಿದ್ದು ಬೆಂಗಳೂರಿನಲ್ಲಿ. ವಿದ್ಯಾರ್ಥಿಯಾಗಿದ್ದಾಗ ಒಂದು ನಾಟಕವನ್ನೂ ಮಾಡಲಿಲ್ಲ. ಮೊದಲಿಂದ ರಾಜ್‌ಕುಮಾರ್ ಅಭಿಮಾನಿಯಾಗಿದ್ದೆ. ಅವರ ಚಿತ್ರಗಳನ್ನು ನೋಡಿ, ಕನ್ನಡಿ ಮುಂದೆ ಅವರ ಪಾತ್ರವನ್ನು ಅನುಕರಿಸುತ್ತಿದ್ದೆ. ಸ್ನೇಹಿತರೆಲ್ಲಾ ನಟನೆಯಲ್ಲಿ ತೊಡಗಲು ಒತ್ತಾಯಿಸಿದರು. ನನ್ನಲ್ಲೂ ಸುಪ್ತವಾಗಿದ್ದ ಆಶೆ ಚಿಗುರೊಡೆದು ನೋಡೋಣ ಎಂದು ಧಾರಾವಾಹಿಯಲ್ಲಿ ನಟಿಸಲು ಆರಂಭ ಮಾಡಿದೆ.

★ *ಧಾರಾವಾಹಿ ನಿರ್ಮಿಸಲು ಸಿದ್ಧತೆ ಹೇಗಿರಬೇಕು?*

ಸೃಜನಶೀಲ ಯೋಚನೆಗಳು ಇರಬೇಕು. ವಾಹಿನಿಯ ಉದ್ದೇಶಿತ ನೈತಿಕ ಎಲ್ಲೆಯನ್ನು ಮೀರದಂತೆ ಯಾವುದೇ ಕಾರ್ಯಕ್ರಮ ಅಥವಾ ಧಾರಾವಾಹಿ ನೀಡುವ ಭರವಸೆ ಇರಬೇಕು. ನಂತರ ಯಾವ ಸ್ಲಾಟ್‌ಗೆ ಕಾರ್ಯಕ್ರಮ ನೀಡುತ್ತೇವೆ ಎನ್ನುವ ಬಗ್ಗೆ ಪಿಪಿಟಿ ಸಿದ್ಧಪಡಿಸಿಕೊಂಡು ಅದನ್ನು ಸಾದರಪಡಿಸಬೇಕು. ನಾವು ಸಿದ್ಧಪಡಿಸಿದ ಪಿಪಿಟಿಯಲ್ಲಿ ಏನನ್ನು ಮಾಡ ಬಯಸುತ್ತೇವೆ ಎನ್ನುವುದು ಇರಬೇಕು. ಚಿತ್ರೀಕರಣಕ್ಕೆ ಆಯ್ದ ಸ್ಥಳಗಳು, ಪಾತ್ರ ವರ್ಗ ಮತ್ತು ಅವುಗಳನ್ನು ಯಾರು ನಿರ್ವಹಿಸುತ್ತಾರೆ ಎಂಬ ವಿವರ ಇರಬೇಕು. ಆರ್ಥಿಕ ಶಿಸ್ತೂ ಸೇರಿದಂತೆ ವಾಣಿಜ್ಯವಾಗಿಯೂ ಎಷ್ಟು ಪ್ರಯೋಜನ ಆಗಬಲ್ಲದು, ವೀಕ್ಷಕರೂ ಏಕೆ ಇಷ್ಟ ಪಡುತ್ತಾರೆ ಎನ್ನುವ ಸಾರಲೇಖವನ್ನು ಅದು ಹೊಂದಿರಬೇಕು. ಎಂತೆಂಥ ಘಟಾನುಘಟಿಗಳ ನಡುವೆ ಚಿಕ್ಕ ವಯಸ್ಸಿನ ನಮ್ಮಂತವರು ಅವರಿಗೆ ಸ್ಪರ್ಧೆ ನೀಡಬೇಕು ಎಂದರೆ ನಮ್ಮ ಆಲೋಚನೆ ವಿಧಾನವೇ ಅದಕ್ಕೆ ಬದಲಾಗಬೇಕು.



★ *ಸರ್ವಮಂಗಳದ ವಿಶಿಷ್ಟತೆ ಏನು?*

ಇಲ್ಲಿ ಅಧ್ಯಾತ್ಮ ಮತ್ತು ಲೌಕಿಕ ಬದುಕಿನ ಸಂಘರ್ಷವನ್ನು ನವಿರಾಗಿ ನಿರೂಪಿಸುವ ಉದ್ದೇಶ ಇದೆ. ನಾಯಕ ಶಿವನ ಭಕ್ತ, ಅವನದು ಪಾರಮಾರ್ಥಿಕ ಚಿಂತನೆ. ಅವನನ್ನು ಪ್ರೀತಿಸುವ ಹುಡುಗಿಗೆ ಲೌಕಿಕತೆಯ ಮೋಹ. ಜೀವನವನ್ನು ಎಂಜಾಯ್ ಮಾಡುವ ಮನೋಭಾವದವಳು. ಇವರಿಬ್ಬರು ಮದುವೆ ಆದರೆ ಹೇಗಿರುತ್ತೆ ಎನ್ನುವುದು ನಮ್ಮ ಕುತೂಹಲ. ಇಲ್ಲಿ ಯಾರು ಯಾರನ್ನು ಪರಿವರ್ತಿಸುತ್ತಾರೆ ಎನ್ನುವುದೂ ಮುಖ್ಯವಾಗುತ್ತದೆ.

★ *ಸೀರಿಯಲ್ ಅಂದರೆ ಮದುವೆ ಇರಲೇಬೇಕಾ?*

ಅದ್ದೂರಿ ಸಂದರ್ಭ ಅಂದರೆ ಮದುವೆ ಮಾತ್ರ. ಅದನ್ನು ನಾಲ್ಕಾರು ದಿನದ ಕಾರ್ಯಕ್ರಮವನ್ನಾಗಿ ರೂಪಿಸಲು ಸಾಧ್ಯವಾಗುತ್ತದೆ. ಧಾರಾವಾಹಿಯ ಒಟ್ಟು ಕುಟುಂಬವನ್ನು ಅಲ್ಲಿ ತೋರಿಸಬಹುದು. ಹತ್ತಾರು ದಿನ ಮದುವೆಯ ವಿವಿಧ ಶಾಸ್ತ್ರಗಳನ್ನು ತೋರಿಸಬಹುದು. ಅದರಲ್ಲಿಯೂ ಭಿನ್ನತೆಯನ್ನು ಚಿತ್ರೀಕರಿಸಬಹುದು. ಒಟ್ಟಾರೆ ಜನ ಅಂತಹ ಖುಷಿ ಸಂದರ್ಭ ನೋಡಲು ಇಷ್ಟಪಡುತ್ತಾರೆ. ಮದುವೆ ಮುಂಜಿಗಳ ಅಲಂಕಾರ, ವೇಷಭೂಷಣ ವೀಕ್ಷಣೆಯೂ ಮುಖ್ಯವಾಗುತ್ತದೆ. ಇದರಲ್ಲಿಯೂ ದೊಡ್ಡ ಮದುವೆಯ ಸೆಟ್ ಇದೆ. ಹದಿನೈದನೇ ಕಂತಿನಿಂದ ಅದು ಆರಂಭವಾಗಬಹುದು.

★ *ನಟನೆ– ನಿರ್ಮಾಣ ಯಾವುದು ನಿಮಗಿಷ್ಟ?*

ಅಭಿನಯ ಬೆಸ್ಟ್ ಅನ್ನಿಸುತ್ತೆ. ಅಲ್ಲಿ ತಲೆ ಬಿಸಿ ಮಾಡಿಕೊಳ್ಳುವುದು ಏನೂ ಇರುವುದಿಲ್ಲ. ಇಲ್ಲಾದರೆ ಜವಾಬ್ದಾರಿ ಹೆಚ್ಚಿರುತ್ತದೆ. ಯಾರಾದರೂ ಕಲಾವಿದರಿಗೆ ತೊಂದರೆಯಾದರೆ ತಕ್ಷಣ ಮುಂದಿನ ಪ್ಲ್ಯಾನ್ ಮಾಡಬೇಕು. ಲೇಖಕರ ಜೊತೆ ಮಾತನಾಡಿ ಅವತ್ತು ಲಭ್ಯ ಇರುವ ಕಲಾವಿದರನ್ನು ಬರುವಂತೆ ಮಾಡಬೇಕು. ಹಗಲು ರಾತ್ರಿ ಎನ್ನದೆ ಜಾಗೃತರಾಗಿರಬೇಕು. ಇಂತಹದ್ದನ್ನು ನೋಡಿದರೆ ನಟನಾಗಿದ್ದರೆ ಇಷ್ಟು ಕಷ್ಟ ಇರುತ್ತಿರಲಿಲ್ಲ ಎನಿಸಿದೆ.

■ **ರಾಘವೇಂದ್ರ**